ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ವಿವಿ ಸಮಗ್ರ ಚಾಂಪಿಯನ್



ಚಾಂಪಿಯನ್ ಜೈನ್ ವಿವಿ ತಂಡ.

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಆತಿಥೇಯ ಜೈನ್ ವಿಶ್ವವಿದ್ಯಾಲಯ ತಂಡ 'ಅಖಿಲ ಭಾರತ ವಿಐಇ-2017' ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಕ್ರೀಡಾಕೂಟದಲ್ಲಿ ಜೈನ್ ವಿವಿ ತಂಡ ಬಹುತೇಕ ಸ್ಪರ್ಧೆಗಳಲ್ಲಿ ಮೇಲುಗೈ ಸಾಧಿಸಿತು.

ಪುರುಷರ ವಿಭಾಗದ ಫೆನ್ಸಿಂಗ್, ಮಹಿಳೆಯರ ಈಜು ತಂಡ, ಮಹಿಳೆಯರ ಟೇಬಲ್ ಟೆನಿಸ್ ತಂಡ, ಬ್ಯಾಡ್ಮಿಂಟನ್ ಪುರುಷರ ಹಾಗೂ ಮಹಿಳಾ ತಂಡಗಳು, ಪುರುಷರ ಫುಟ್‌ಬಾಲ್, ಪುರುಷರ ಹಾಗೂ ಮಹಿಳೆಯರ ಕರಾಟೆ ತಂಡಗಳು ಪ್ರಶಸ್ತಿ ಜಯಿಸಿದವು.

ಜೈನ್ ವಿವಿ ತಂಡದ ನಿಶ್ರೇಯಾಸ್ ಎಂ.ವಿ ಹಾಗೂ ಕುಸುಮಾ ಸಿಂಗ್ ಕ್ರಮವಾಗಿ ಪುರುಷರ ಹಾಗೂ ಮಹಿಳಾ ವಿಭಾಗದಲ್ಲಿ ಬೆಸ್ಟ್ ಫೆನ್ಸರ್ ಪ್ರಶಸ್ತಿ ಪಡೆದರು.